**ಚಾಸಾಃ 6 ಪ್ರಾಸಾಃ 5**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 1106/2020**

| | | |
|---|---|---|
| ಹೆಸರು | : | ಶಶಿರಾಜ ಶೆಟ್ಟಿ |
| ತಂದೆಯ ಹೆಸರು | : | ಪುರಂದರ ಶೆಟ್ಟಿ |
| ಪ್ರಾಯ | : | 36 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಗುರುವಾಯನಕೆರೆ, ಬೆಳ್ತಂಗಡಿ ತಾಲೂಕು |

**ದಿನಾಂಕ 17.03.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ನಿಪಿ4ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು. ದಿಃ 18.7.2020 ರಂದು ಸವಣಾಲು ಬೆಲತಕಟ್ಟೆ ಎಂಬಲ್ಲಿ ಪೊಲೀಸರು ಮಹಜರ್ ಮಾಡಲು ಬಂದಿದ್ದಾಗ ನಿಪಿ4 ಕ್ಕೆ ಸಹಿ ಮಾಡಿದ್ದೇನೆ. ಆಗ ನನ್ನ ಜೊತೆ ಚಾಸಾ1 ಮತ್ತು 7 ರವರು ಎಂಬುವವರು ಇದ್ದರು. ಬೆಳಿಗ್ಗೆ 10 ಗಂಟೆಯಿಂದ 10.45 ಗಂಟೆಯವರೆಗೆ ಪೊಲೀಸರು ಮಹಜರ್ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ4 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ಪೊಲೀಸರಿಗೆ ಸ್ಥಳವನ್ನು ಚಾಸಾ3 ರವರು ತೋರಿಸಿಕೊಟ್ಟಿರುತ್ತಾರೆ.

ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ. ಪಿ.ಎಂ ವಕೀಲರಿಂದಃ

ನನ್ನ ಮನೆ ಗುರುವಾಯನಕೆರೆಯಲ್ಲಿರುತ್ತದೆ. ನಮ್ಮ ಮನೆಯಿಂದ ತಕ್ಷೀರು ಸ್ಥಳಕ್ಕೆ 6 ಕಿ.ಮೀ ದೂರ ಇರುತ್ತದೆ. ತಕ್ಷೀರು ಸ್ಥಳಕ್ಕೆ ಯಾವ ಕಾರಣಕ್ಕೆ ಹೋಗಿದ್ದಿರಿ ಎಂದರೆ ಸಾಕ್ಷಿ ಸೋಷಿಯಲ್ ಮಿಡಿಯಾದಲ್ಲಿ ವಯಸ್ಸಾದ ವೃದ್ದೆಗೆ ಮಕ್ಕಳು ಹಲ್ಲೆ ಮಾಡಿದ್ದಾರೆ ಎಂದು ತಿಳಿದುಬಂದಿದ್ದು, ನಮ್ಮ

ಸಮುದಾಯದವರು ಆದ ಕಾರಣ ನೋಡಲು ಹೋಗಿದ್ದೆವು. ನಾವು ಹೋದ ನಂತರ ಪೊಲೀಸರು ಬಂದಿರುತ್ತಾರೆ. ಆ ಸಮಯದಲ್ಲಿ ನಾನು ಸಾಮಾಜಿಕವಾಗಿ ಗುರುತಿಸಿಕೊಂಡಿದ್ದೆ, ರಾಜಕೀಯವಾಗಿ ಈಗ ಗುರುತಿಸಿಕೊಂಡಿದ್ದೇನೆ. ನಮ್ಮ ಜಾತಿ ಬಾಂದವರಾಗಲಿ ಅಥವಾ ಇತರರಾಗಲಿ ಯಾರಾದರೂ ಸಹಾಯ ಕೇಳಿದರೆ ಮಾಡುತ್ತೇನೆ. ಈ ಪ್ರಕರಣದಲ್ಲಿ ದೂರನ್ನು ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಚಾಸಾ3 ರವರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ನಮ್ಮ ಜಾತಿ ಸಂಘಟನೆಯ ಯುವಭಂಟರ ಸಂಘದ ಸದಸ್ಯನಾಗಿದ್ದೆ. ಈ ಪ್ರಕರಣದ ಗಾಯಾಳು ನಿಮ್ಮದೇ ಜಾತಿ ಸಮುದಾಯಕ್ಕೆ ಸೇರಿದವರು ಎಂದರೆ ಹೌದು. ಆ ಅನುಕಂಪದಿಂದ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮಾನವೀಯತೆಯಿಂದ ಹೇಳುತ್ತಿದ್ದೇನೆ. ಆ ದಿನ ನೀವು ಪ್ರಥಮವಾಗಿ ಎಷ್ಟು ಗಂಟೆಗೆ ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸಾಕ್ಷಿ 9.30 ರಿಂದ 10 ಗಂಟೆಯ ಸಮಯದಲ್ಲಿ ಹೋಗಿದ್ದೇವೆ ಎಂದು ಹೇಳುತ್ತಾರೆ. ನೀವು ಹೋದ ಅಂದಾಜು ಎಷ್ಟು ಗಂಟೆಯ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದಾರೆ ಎಂದರೆ ಸಾಕ್ಷಿ ಅರ್ಧ ಗಂಟೆ ನಂತರ ಬಂದಿದ್ದಾರೆ ಎಂದು ಹೇಳುತ್ತಾರೆ. ಪ್ರಥಮ ಬಾರಿಗೆ ಸ್ಥಳಕ್ಕೆ ಹೋದಾಗ ನಿಮ್ಮನ್ನು ಹೊರತುಪಡಿಸಿ ಸ್ಥಳದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಚಾಸಾ7, ಉಳಿದ ಹಾಗೆ ಅವರ ಮನೆಯವರು ಇದ್ದರು. ಅವರ ಮನೆಯವರು ಎಷ್ಟು ಜನ ಇದ್ದರು ಎಂದರೆ 4 ರಿಂದ 5 ಜನ ಇದ್ದರು. ಆ ದಿನ ಎಷ್ಟು ಜನ ಪೊಲೀಸರು ಸ್ಥಳಕ್ಕೆ ಬಂದಿದ್ದರು ಎಂದರೆ ನೆನಪಿಲ್ಲ. ಸ್ಥಳಕ್ಕೆ ಬಂದಿದ್ದ ಪೊಲೀಸರು ಏನೆಲ್ಲಾ ವಸ್ತುಗಳನ್ನು ತಂದಿದ್ದರು ಎಂದರೆ ನೆನಪಿಲ್ಲ.

2. ನೀವು ಸಹಿ ಮಾಡಿದ ದಾಖಲೆಯಲ್ಲಿ ಸದರಿ ಮನೆಯ ಮೇಲ್ಛಾವಣಿ ಯಾವ ಮಾದರಿ ಎಂಬುದನ್ನು ನಮೂದು ಮಾಡಿದ್ದಾರಾ ಎಂದರೆ ಸಾಕ್ಷಿ ಹಂಚಿನ ಮನೆ ಆಗಿದ್ದು, ಅದನ್ನು ನಮೂದು ಮಾಡಿದ್ದಾರೋ ಇಲ್ಲವೋ ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಆ ಮನೆಯ ಮುಂಬದಿಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ನಮೂದು ಮಾಡಿದ್ದಾರಾ ಎಂದರೆ ಸಾಕ್ಷಿ ಉತ್ತರಕ್ಕೆ ಇದೆ ಎಂದು ನಮೂದು ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಮನೆಯಲ್ಲಿ ಎಷ್ಟು ಕೋಣೆ ಇವೆ ಎಂದರೆ ಸಾಕ್ಷಿ 7 ಕೋಣೆ ಇವೆ ಎಂದು ಹೇಳುತ್ತಾರೆ. ಮನೆಗೆ ಒಳ ಪ್ರವೇಶ ಮಾಡಿದ ಯಾವ ಭಾಗದ ಕೋಣೆಯಲ್ಲಿ ನೀವು ಹೇಳಲಾದ ಘಟನೆ ನಡೆದಿದೆ ಎಂದರೆ ಸಾಕ್ಷಿ ನಾನು ನೋಡಿದ್ದು ಎಡಭಾಗದಲ್ಲಿ ಆದರೆ ಎಲ್ಲಿ ನಿಖರವಾಗಿ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ನೀವು ಸಹಿ ಮಾಡಿದ ದಾಖಲೆಯಲ್ಲಿ ಮನೆಯ ಚೆಕ್ಕುಬಂದಿಯನ್ನು ಬರೆದಿದ್ದಾರಾ ಎಂದರೆ ನಮೂದು ಮಾಡಿರಬೇಕು, ನನಗೆ ನೆನಪಿಲ್ಲ. ತಕ್ಷೀರು ನಡೆದಿದೆ ಎಂದು ಹೇಳಲಾದ ಮನೆಯ ಮೇಲ್ಛಾವಣಿ ಸಂಪೂರ್ಣ ಹಂಚಿನಿಂದ ಕೂಡಿದ್ದಾ ಅಥವಾ

ಶೀಟನ್ನು ಹಾಕಿದ್ದಾರಾ ಎಂದರೆ ಸಾಕ್ಷಿ ಹಂಚು ಇರುವುದನ್ನು ಮಾತ್ರ ಗಮನಿಸಿದ್ದೇನೆ ಎಂದು ಹೇಳುತ್ತಾರೆ. ಮನೆಗೆ ಹೋದಾಗ ಘಟನೆ ನಡೆದು ಎಷ್ಟು ದಿನ ಆಯಿತು ಎಂಬ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ 13ನೇ ತಾರೀಖಿನಂದು ಆಗಿದೆ, 17ನೇ ತಾರೀಖಿನಂದು ವಿಡಿಯೋ ವೈರಲ್ ಆಗಿದೆ ಎಂದು ಹೇಳುತ್ತಾರೆ. ನೀವು ಪ್ರಥಮ ಬಾರಿಗೆ ಮನೆಗೆ ಹೋದಾಗ ಅಪ್ಪಿ ಹೆಂಗಸು ಮನೆಯ ಯಾವ ಕೋಣೆಯಲ್ಲಿದ್ದರು ಎಂದರೆ ಸಾಕ್ಷಿ ಕೋಣೆಯಲ್ಲಿ ಇರಲಿಲ್ಲ, ಹಾಲ್ ನಲ್ಲಿ ಎಡಭಾಗದಲ್ಲಿ ಇದ್ದರು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಅಪ್ಪಿ ಹೆಂಗಸು ರವರಿಗೆ ಬ್ಯಾಂಡೇಜ್ ಗಳನ್ನು ಹಾಕಿದ್ದರಾ ಎಂದರೆ ಈಗ ನನಗೆ ನೆನಪಿಲ್ಲ. ನೀವೇನಾದರೂ ಅಪ್ಪಿ ಹೆಂಗಸನ್ನು ಮಾತನಾಡಿಸಲು ಪ್ರಯತ್ನಿಸಿದ್ದೀರಾ ಎಂದರೆ ಹೌದು. ಆ ಸಮಯದಲ್ಲಿ ತಕ್ಷೀರು ಬಗ್ಗೆ ವಿಚಾರ ಹೇಳಿದ್ದಾರಾ ಎಂದರೆ ಸಾಕ್ಷಿ ಹೆದರಿದ್ದರು ಎಂದು ಹೇಳುತ್ತಾರೆ.

3. ನೀವು ಸಹಿ ಮಾಡಿದ ದಾಖಲೆ ಕೈಬರವಣಿಗೆಯಲ್ಲಿತ್ತಾ ಅಥವಾ ಬೆರಳಚ್ಚು ಮಾಡಿದ್ದಾರಾ ಎಂದರೆ ಸಾಕ್ಷಿ ಬೆರಳಚ್ಚು ಮಾಡಿದ್ದರು ಎಂದು ಹೇಳುತ್ತಾರೆ. ಎಲ್ಲಿ ಎಷ್ಟು ದಿನಗಳ ನಂತರ ಪೊಲೀಸ್ ಠಾಣೆಯಲ್ಲಿ ಬೆರಳಚ್ಚು ಮಾಡಿದ್ದಾರೆ ಎಂದರೆ ಸಾಕ್ಷಿ ತಕ್ಷೀರು ಸ್ಥಳದಲ್ಲಿಯೇ ಮಾಡಿದ್ದಾರೆ ಎಂದು ಹೇಳುತ್ತಾರೆ. ತಕ್ಷೀರು ಸ್ಥಳದ ಎಲ್ಲಿ ಮಾಡಿದ್ದಾರೆ ಎಂದರೆ ಸಾಕ್ಷಿ ಮನೆಯ ಹೊರಗೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಪೊಲೀಸರು ಸ್ಥಳದಲ್ಲಿ ನಕ್ಷೆ ತಯಾರು ಮಾಡಿದ್ದಾರಾ ಎಂದರೆ ನೆನಪಿಲ್ಲ. ಆ ದಿನ ನಾನು ಮತ್ತು ಚಾಸಾ7 ರವರು ಒಟ್ಟಿಗೆ ಹೋಗಿರುತ್ತೇವೆ. ಸಾಮಾಜಿಕವಾಗಿ ಗುರುತಿಸಿಕೊಂಡಿದ್ದ ಕಾರಣ ಆಗಾಗ ಪೊಲೀಸ್ ಠಾಣೆಗೆ ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ಕಡಿಮೆ ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನಿಪಿ4 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ನಮ್ಮ ಜಾತಿ ಬಾಂದವರಾದ ಕಾರಣ ಅವರಿಗೆ ಸಹಾಯ ಮಾಡಲು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿ ಸ್ಥಳದಲ್ಲಿಯೇ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

(2ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)